ಶ್ರೀ ಸಿದ್ದರಾಮಯ್ಯ : ನಾವು ಇದಕ್ಕೆ ವಿರುದ್ಧವಾಗಿದ್ದೇವೆ. ಯಾರು ಮಧ್ಯವರ್ತಿಗಳಿದ್ದಾರೆ, Real estateಗಳು ಇದ್ದಾರೆ, ಅವರಿಗೆ ಸಹಾಯ ಮಾಡುವುದಕ್ಕೋಸ್ಕರ, ಚುನಾವಣೆಯಲ್ಲಿ ಮತದಾರರನ್ನು ಸೋಸಮಾಡುವುದಕ್ಕೋಸ್ಕರವಾಗಿ, ಅವರನ್ನು ಓಲೈಸಿಕೊಳ್ಳುವುದಕ್ಕೋಸ್ಕರವಾಗಿ, ಯಾರ್ಯಾರು ಕಾನೂನು ಬಾಹಿರವಾಗಿ ಲೇಔಟ್ ಮಾಡುತ್ತಾರೆ, ಅವರಿಗೆ ಸಹಾಯ ಮಾಡುವುದಕ್ಕೋಸ್ಕರವಾಗಿ ಇದನ್ನು ಮಾಡಿದ್ದಾರೆ. ನಾವು ಇದನ್ನು ವಿರೋಧಿಸಿ ಸಭೆಯಿಂದ ಹೊರ ನಡೆಯುತ್ತಿದ್ದೇವೆ.

(ಗೊಂದಲ)

(ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಶಾಸಕರುಗಳು ಸಭೆಯಿಂದ ನಿರ್ಗಮಿಸಿದರು)

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತ್ತು

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

(iii) ಕರ್ನಾಟಕ ಆರ್ಥಿಕ ಹೊಣೆಗಾರಿಕೆ(ಎರಡನೇ ತಿದ್ದುಪಡಿ)ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 2009ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ, 2009ನ್ನು ಪರ್ಯಾಲೋಚಿಸಬೇಕೆಂದು ಕೋರಿದ್ದೇನೆ. 2002ರಲ್ಲಿ ಈ ವಿಧೇಯಕ ಜಾರಿಗೆ ಬಂದಾಗ, ವಿತ್ತೀಯ ಕೊರತೆ ಇಟ್ಟು ರಾಜ್ಯ ಉತ್ಪನ್ನದ ಶೇಕಡ 3 ರೊಳಗೆ ಇರಬೇಕೆಂದು ನಿಯಮವಿತ್ತು. ಕಳೆದ ವರ್ಷದ ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ಕೇಂದ್ರ ಇದನ್ನು ಶೇಕಡಾ 3.5ಕ್ಕೆ ಏರಿಸುವುದಕ್ಕೆ ಅನುಮತಿ ಕೊಟ್ಟಿದೆ. ಈ ಮಧ್ಯೆ ಶೇಕಡಾ 4ರವರೆಗೆ ಏರಿಸುವ ಬಗ್ಗೆ ಅನುಮತಿ ನೀಡಿದೆ. ಈ ವರ್ಷ ಮಾರ್ಚ್ 31, 2009ರಲ್ಲಿ ರಾಜ್ಯ ಒಟ್ಟು ಉತ್ಪನ್ನ GSDP 2,88,838 ಕೋಟಿ ರೂ.ಗಳಷ್ಟು ಇದೆ. So, ಈ ಏರಿಕೆಯಿಂದ ಮತ್ತೆ 2800 ಕೋಟಿ ರೂ.ಗಳಷ್ಟು ಹೆಚ್ಚು ಸಾಲ ಪಡೆಯುವುದಕ್ಕೆ ಅವಕಾಶ·ದೊರೆಯುತ್ತದೆ. ನಾವು ಸಾಲ ಪಡೆಯಬೇಕೆಂದೇನೂ ಇಲ್ಲ. ಆದರೆ ಅಗತ್ಯವಿದ್ದಾಗ ವಿತ್ತೀಯ ಕೊರತೆ ಅಷ್ಟು ಆಗಬಹುದು ಎನ್ನುವುದಕ್ಕೆ ಇದೊಂದು ಅವಕಾಶ ಮಾಡಿಕೊಡುವಂತಾದ್ದು ಆಗಿದೆ. ಕೇಂದ್ರದ ಅನುಮತಿಯೊಂದಿಗೆ, ಒಪ್ಪಿಗೆಯೊಂದಿಗೆ ಇಡುತ್ತಿರತಕ್ಕಂಥ ವಿಧೇಯಕ ಇದಾಗಿದೆ. ಅದನ್ನು ಬಿಟ್ಟು ಬೇರೇನೂ ಇಲ್ಲ. ಇದಕ್ಕೆ ಸದನ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಈ Fiscal Responsibility Act, 2002ನ್ನು ಮೊದಲನೇ ಬಾರಿಗೆ ಕರ್ನಾಟಕದಲ್ಲಿ ಅದನ್ನು ಜಾರಿಗೆ ತರಲಾಯಿತು. ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟು ಹೋಗಿ, revenue deficit ಹೆಚ್ಚಾಗಿ, fiscal deficit more than 5% ಆಗಿಟ್ಟಿತ್ತು. ಆಗ revenue deficit more than 3000 crores ಆಗಿತ್ತು. ಆ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆಲ್ಲಾ ಚರ್ಚೆ ಮಾಡಿ, ಇಡೀ ದೇಶದಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಇದನ್ನು ಜಾರಿಗೆ ತರಲಾಯಿತು. ಆಗ ಸಾಲ ತೆಗೆದುಕೊಂಡು

revenue expenditure ಅನ್ನು meet ಮಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅನೇಕ ಕಡೆಗಳಲ್ಲಿ ಸಂಬಳ ಕೊಡಲಿಕ್ಕೆ ಸಾಲ ತೆಗೆದುಕೊಳ್ಳಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅದಕ್ಕಾಗಿ ಅನೇಕ ಸುಧಾರಣೆಗಳನ್ನು ಒಳಗೊಂಡ ಈ Act ಜಾರಿಗೆ ತರಲಾಯಿತು. ಸದರಿ Act ನ ಸೆಕ್ಷನ್ 4ರಲ್ಲಿ fiscal deficit 3% ಗಿಂತ ಕಡಿಮೆ ಇರಬೇಕು, ಇವರು revenue deficit 2005-06 ರ ಕೊನೆಯಲ್ಲಿ wipe off ಆಗಬೇಕು, revenue surplus ಗೆ ಬರಬೇಕೆಂಬ ಕಾರಣದಿಂದ ಈ Act ಜಾರಿಗೆ ತರಲಾಗಿತ್ತು. ಈಗ ಅಲ್ಲಿ global melt down, economic melt down ಆದ ಮೇಲೆ ನೀವು fiscal deficit ಅನ್ನು 3.5 ರಿಂದ 4% ವರೆಗೂ ಕೂಡ ಮಾಡಿಕೊಳ್ಳಿ ಎಂದು ಕೇಂದ್ರ ಸರ್ಕಾರದವರು ಹೇಳಿದಿರುವುದು ನಿಜ. But, ನೀವೇನು ಹೇಳುತ್ತಿದ್ದೀರಿ ಎಂದರೆ, ಸಾಲ ತೆಗೆದುಕೊಳ್ಳುವುದಕ್ಕೋಸ್ಕರ ಮಾಡುತ್ತಿದ್ದೇವೆಂದು ಬರೆದುಕೊಂಡಿದ್ದೀರಿ. ಏಕೆ ಆ ರೀತಿ ಬರೆದಿದ್ದೀರಿ? "....2009–10ನೇ ಹಣಕಾಸು ವರ್ಷದಲ್ಲಿ ಆರ್ಥಿಕ ಕೊರತೆಯು ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 4 ರಷ್ಟನ್ನು ಮೀರತಕ್ಕದ್ದಲ್ಲ" ಎಂದು ತಿದ್ದುಪಡಿ ಮಾಡುವುದಾಗಿ ನೀವು ಹೇಳಿದ್ದೀರಿ. Objections and Reasons ನಲ್ಲಿ ನೀವು "....ಆರ್ಥಿಕ ಕೊರತೆಯ ಮಿತಿಯನ್ನು ಒಂದು ಸಲದ ನಿಯಮ ಸಡಿಲಿಕೆಯಾಗಿ ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 4ಕ್ಕೆ ಏರಿಸುವುದಕ್ಕಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ರ 4ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ" ಎಂದು ಹೇಳಿದ್ದೀರಿ. "ಆರ್ಥಿಕ ಜ್ಞಾಪನ"ದಲ್ಲಿ ಆರ್ಥಿಕ ಕೊರತೆಯ ಮಿತಿಯನ್ನು ರಾಜ್ಯದ ಒಟ್ಟು ಅಂದಾಜು ಆಂತರಿಗೆ ಉತ್ಪನ್ನದ ಶೇಕಡಾ 4ಕ್ಕೆ ಏರಿಸುವ ತಿದ್ದುಪಡಿಯ ಪರಿಣಾಮವಾಗಿ 2009–10 ನೇ ಸಾಲಿನಲ್ಲಿ ಸುಮಾರು 2800 ಕೋಟಿ ರೂಪಾಯಿಗಳ ಹೆಚ್ಚುವರಿ ಸಾಲಗಳನ್ನು ಪಡೆದು ಕೊಳ್ಳಬೇಕಾಗುತ್ತದೆ...." ಎಂದು ಹೇಳಿದ್ದೀರಿ. ಆ ರೀತಿ ಏಕೆ ಬರೆಯುತ್ತೀರಿ? ಸಾಲ ತೆಗೆದುಕೊಳ್ಳುವುದಕ್ಕಾಗಿಯೇ ಇದನ್ನು ಮಾಡುತ್ತೀದ್ದಿರಾ? ನಾನು ಇದನ್ನು ಓದಿಕೊಂಡೇ ಹೇಳುತ್ತಿದ್ದೇನೆ, ನೀವೂ ಸಹ ಇದನ್ನು ಓದಿಕೊಂಡಿದ್ದೀರಿ ಎಂದು ಭಾವಿಸುತ್ತೇನೆ. UPA ಸರ್ಕಾರ ಮಂಡಿಸಿದ Government of India ದ ಈ ಸಾಲಿನ ಬಜೆಟ್‌ನಲ್ಲಿ

ಯಾವುದೇ ಕಾರಣಕ್ಕೆ 0.5% of the GDP ಗಿಂತ ಹೆಚ್ಚಾಗಬಾರದು ಎಂದು ಹೇಳಿದ್ದಾರೆ. ನೀವು ಅದನ್ಯಾಕೆ ಇಷ್ಟೇ ಸಾಲ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ? 2800 ಕೋಟಿ ರೂ.ಗಳ ಸಾಲ ತೆಗೆದುಕೊಳ್ಳುವುದಕ್ಕೆ ಹೊಗುತ್ತೇವೆಂದು ಏಕೆ ಹೇಳಿದ್ದೀರಿ? ನಾನು Finance Minister ಆಗಿದ್ದ ಅನುಭವದಿಂದ ಇದನ್ನು ಹೇಳುತ್ತಿದ್ದೇನೆ. Fiscal Responsibility Actನಲ್ಲಿ ಇನ್ನೊಂದನ್ನು ನಾವು ಬರೆದುಕೊಂಡಿದ್ದೇವೆ. ಅದನ್ನು ನಾನು ಈಗ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. 2006ರ ಮಾರ್ಚಿ 31ರೊಳಗೆ ರಾಜಸ್ವ ಕೊರತೆ ಶೂನ್ಯವಾಗುವಂತೆ ಕಡಿಮೆ ಮಾಡುವುದರ ಕೊತೆಗೆ, 2015ರೊಳಗೆ....

ಡಾ: ವಿ.ಎಸ್.ಆಚಾರ್ಯ : ಒಟ್ಟು ಹದಿಮೂರು ವರ್ಷಗಳು.

ಶ್ರೀ ಸಿದ್ದರಾಮಯ್ಯ : ಹೌದು. ಈಗ ನಾವು 2009ರಲ್ಲಿದ್ದೇವೆ. ಇನ್ನೂ 6 ವರ್ಷಗಳಿವೆ. ಆದರೆ ಈಗ ನೀವು ಇದನ್ನು ಶೇಕಡಾ 4%ಕ್ಕೆ ಏರಿಸಿಕೊಂಡು ಮತ್ತೆ fiscal deficit ಅನ್ನು Zero ಗೆ ತೆಗೆದುಕೊಂಡು ಬರುತ್ತೀರಾ?

ಡಾ: ವಿ.ಎನ್.ಆಚಾರ್ಯ : 2002ರಿಂದ 2006ರೊಳಗೆ Fiscal Responsibility Bill ಬಂದಾಗ revenue deficit ಹೆಚ್ಚಿತ್ತು. ಆದರೆ did we not dramatically reduce it?

ಶ್ರೀ ಸಿದ್ದರಾಮಯ್ಯ : ಈ Act ಬರುವುದಕ್ಕೆ ಮೊದಲು ನಿಮ್ಮ ಸಾಲ ಎಷ್ಟಿತ್ತು? ಈಗ ಸಾಲ ಎಷ್ಟಿದೆ? ಎಂಬುದನ್ನು ಹೇಳಿ ನೋಡೋಣ.

ಡಾ: ವಿ.ಎಸ್.ಆಚಾರ್ಯ : ದಯವಿಟ್ಟು ತಾವು ಒಂದು ನಿಮಿಷ ಯೀಲ್ಡ್ ಆದರೆ, ಆ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಅಷ್ಟು ವರ್ಷಗಳಿಂದ ಮಾಡದಷ್ಟು ಸಾಲವನ್ನು ಮಾಡಿದ್ದೀರಿ. ರಾಜ್ಯಕ್ಕೆ 3 ವರ್ಷಗಳಲ್ಲಿ ಸಾಲ ಜಾಸ್ತಿಯಾಗಿದೆ. ನಾನು ಮಾತನಾಡುವಾಗ ಎಲ್ಲವನ್ನೂ ಹೇಳುತ್ತೇನೆ.

ಡಾ: ವಿ.ಎಸ್. ಆಚಾರ್ಯ : Revenue deficit wipe out ಆಗಿದೆ.

ಶ್ರೀ ಸಿದ್ದರಾಮಯ್ಯ : ಅದನ್ನು ನೀವಲ್ಲ, ನಾವೇ ಮಾಡಿದ್ದು.

ಡಾ: ವಿ.ಎಸ್. ಆಚಾರ್ಯ : ಯಾರಾದರೂ ಮಾಡಲಿ. ಅದು Government of Karnataka ತಾನೇ?

ಶ್ರೀ ಸಿದ್ದರಾಮಯ್ಯ : Deficit ಅನ್ನು 2.42ಗೆ ತಂದವರೇ ನಾವು. ಮೊದಲು ನಾನು ಮಾತನಾಡುತ್ತೇನೆ. ನಂತರ ತಾವು ಎಲ್ಲವನ್ನೂ ಪೇಳಿ. ನನಗೆ ಹೇಳುವುದಕ್ಕೆ ಬಿಡದೆ ನೀವೆಲ್ಲರೂ ಮಧ್ಯದಲ್ಲಿ ಎದ್ದು ನಿಂತು ಬಿಟ್ಟರೆ

ಹೇಗೆ? ಮಾನ್ಯ ಮುಖ್ಯಮಂತ್ರಿಗಳು ನಿಂತು ಬಿಟ್ಟರೆ ನಮಗೆ ತಾಪತ್ರಯ ವಾಗುತ್ತದೆ. Leader of the House ಆಗಿರುವ ಮಾನ್ಯ ಮುಖ್ಯಮಂತ್ರಿಗಳೇ ಎದ್ದು ಬಿಟ್ಟರಲ್ಲಾ ಎಂದು ನಮಗೆ ತಾಪತ್ರಯವಾಗುತ್ತದೆ. 2005–06ರ financial year ನಲ್ಲಿ fiscal deficit was 2.42. ಇವರು ಬಂದಾಗ fiscal deficit continuous ಏರಿಕೊಂಡೇ ಹೋಗುತ್ತಿದೆ. Even revenue surplus is also coming down. ಈ ವರ್ಷ ನಷ್ಟದು revenue deficit ಬರಬಹುದು. 2008–09ಕ್ಕೆ ಲೆಕ್ಕ ಹಾಕಿದ ಮೇಲೆ we may again reach revenue deficit. I don't know. ನೀವು ಮಾಡಿರುವ ಸಾಲ, ಎಲ್ಲವನ್ನೂ ನೋಡಿದರೆ revenue deficit ಗೆ ಬರಬಹುದು. Even resource mobilization ಅನ್ನೂ ಕೂಡ ನೀವು ಮಾಡಲಿಕ್ಕಾಗಿಲ್ಲ. ಆ ಕಾರಣದಿಂದ ನಾನೇನು ಹೇಳುತ್ತಿದ್ದೇನೆ ಎಂದರೆ, ನೀವು ಸಾಲ ತೆಗೆದುಕೊಳ್ಳುವು ದಕ್ಕೋಸ್ಕರವೇ ಇದನ್ನು ತಿದ್ದುಪಡಿ ಮಾಡಬಾರದು. ಕೇಂದ್ರ ಸರ್ಕಾರದವರು ಈ ವರ್ಷ recession ಇರುವುದರಿಂದ, ನಿಮ್ಮ Fiscal Responsibility Act ನಲ್ಲಿ ಸ್ವಲ್ಪ relax ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಆದರೆ, ಅದನ್ನೇ defence ಆಗಿ ಮಾಡಿಕೊಂಡು ಸಾಲ ತೆಗೆದುಕೊಳ್ಳಲು ಹೋಗುತ್ತೇವೆಂದು ಅದನ್ನು ಉಪಯೋಗಿಸಿಕೊಂಡು ಮಾಡತಕ್ಕದ್ದು ಸರಿಯಾದ ಕ್ರಮವಲ್ಲ. ಸಾಲ ಈಗಾಗಲೇ ಜಾಸ್ತಿಯಾಗಿದೆ. Debt service ಜಾಸ್ತಿಯಾಗುತ್ತದೆ. ಕರ್ನಾಟಕ ವನ್ನು ಯಾವುದೇ ಕಾರಣಕ್ಕೆ debt trap ಗೆ ಹೋಗದ ರೀತಿಯಲ್ಲಿ ನೋಡಿಕೊಳ್ಳಬೇಕಾದ ಜವಾಬ್ದಾರಿ ನಿಮ್ಮ ಮೇಲಿದೆ. ಇದರ ಬಗ್ಗೆ ನಾನು ಈಗಲೇ ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) : ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಂಥ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೋದ ಬಾರಿ 2005–06ನೇ ಸಾಲಿನ ನಂತರ ಪ್ರತಿ ವರ್ಷ ಸರ್ಕಾರದ ವಿತ್ತೀಯ ಕೊರತೆ ರಾಜ್ಯದ ಒಟ್ಟು ಆದಾಯದ ಶೇ. 3ರ ಮಿತಿಯಲ್ಲಿರಬೇಕು ಎಂದು ಹೇಳಿದ್ದಾರೆ. ಅದನ್ನು ನೀವೂ ಪಾಲನೆ ಮಾಡಿಕೊಂಡು ಬಂದಿರಿ, ನಾವು ಪಾಲನೆ ಮಾಡಿಕೊಂಡು ಬಂದೆವು. ಆ ಮಿತಿಯನ್ನು ದಾಟಿಲ್ಲ. ಹೋದ ವರ್ಷ ಮೂರೂವರೆ ಪರ್ಸೆಂಟ್‌ವರೆಗೂ ಅವಕಾಶ ಇತ್ತು. ಆದರೆ, ನಾವು 3 ಪರ್ಸೆಂಟ್ ದಾಟಲಿಲ್ಲ. ಆದರೆ, ಈಗ

ಹಣಕಾಸಿನ ಹಿನ್ನಡೆಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವೇ 4 ಪರ್ಸೆಂಟ್‌ವರೆಗೆ ಅವಕಾಶ ಮಾಡಿಕೊಟ್ಟಿದೆ.

ಶ್ರೀ ಸಿದ್ದರಾಮಯ್ಯ : ಹೋದ ವರ್ಷ ಮೂರೂವರೆ ಪರ್ಸೆಂಟ್‌ಗೆ ತಿದ್ದುಪಡಿ ಮಾಡಿಕೊಂಡಿರಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅದಕ್ಕೇ ಈಗ ಪ್ರಾವಿಜನ್ ಮಾಡಿ ಇಟ್ಟುಕೊಳ್ಳುತ್ತಿದ್ದೇವಷ್ಟೆ. ಅದರ ಅರ್ಥ ಸಾಲ ತೆಗೆದುಕೊಳ್ಳಬೇಕೆಂದು ಅಲ್ಲ. ತಾವು ಹೋದ ವರ್ಷ ಮಾಡಿಕೊಂಡಿರಲಿಲ್ಲವೆಂದು ಹೇಳಿದಿರಲ್ಲಾ ಅದಕ್ಕೇ ಪ್ರಾವಿಜನ್ ಮಾಡಿ ಇಟ್ಟುಕೊಳ್ಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : Original Fiscal Responsibility Act ನಲ್ಲಿ ಇದೆಯೇ ಹೇಳಿನೋಡೋಣ?

ಶ್ರೀ ಬಿ.ಎಸ್.ಯಡಿಯೂರಪ್ಪ : ಯಡಿಯೂರಪ್ಪನವರೆ, ನೀವು ಸಾಲ ಎಷ್ಟು ತೆಗೆದುಕೊಂಡಿದ್ದೀರಿ ಎಂದು ತವು ಕೇಳಿದಿರಿ. 2008–09ರಲ್ಲಿ ಹೊಸದಾಗಿ ಪಡೆದಂತ ಸಾಲ 6878 ಕೋಟಿ. ಇವತ್ತು ನಾವು ಈ ಪ್ರಾವಿಜನ್ ಮಾಡಿಕೊಳ್ಳುತ್ತಿರುವುದು ಏಕೆಂದರೆ, ಏಕೆ ಕೇಂದ್ರ ಸರ್ಕಾರ ಮೊದಲು 3 ರಿಂದ 3.5 ಪರ್ಸೆಂಟ್ ಅನಂತರ 4 ಪರ್ಸೆಂಟ್‌ಗೆ ಅವಕಾಶ ಮಾಡಿಕೊಟ್ಟಿತು? ಆರ್ಥಿಕ ಹಿನ್ನಡೆ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳು ಅಭಿವೃದ್ಧಿಗೆ ಅಡ್ಡಿ ಆತಂಕಗಳು ಆಗಬಾರದು ಎಂಬ ಉದ್ದೇಶದಿಂದ ಈ ಪ್ರಾವಿಜನ್ ಮಾಡಿಕೊಂಡರು. ಅದನ್ನು ಕೇಂದ್ರಕ್ಕೂ ಮತ್ತು ರಾಜ್ಯಗಳಿಗೂ ಅನ್ವಯ ಮಾಡಿಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ಪ್ರಾವಿಜನ್ ಮಾಡಿಕೊಳ್ಳುತ್ತಿದ್ದೇವೆ. ಅದರ ಅರ್ಥ ನೀವು 4 ಪರ್ಸೆಂಟ್‌ವರೆಗೆ ಸಾಲ ತೆಗೆದುಕೊಳ್ಳಬೇಕು, ಖರ್ಚು ಮಾಡಬೇಕೆಂದಲ್ಲ. ನಮ್ಮ ಇತಿಮಿತಿಯೊಳಗೆಯೇ ಮಾಡೋಣ. ಅನಿವಾರ್ಯವಾಗಿ ಸಾಲ ತೆಗೆದುಕೊಳ್ಳ ಬೇಕಾಗಬಹುದು ಎಂಬ ಕಾರಣದಿಂದ ಪ್ರಾವಿಜನ್ ಮಾಡಿಕೊಂಡಿರುವುದು. ಕೇಂದ್ರ ಸರ್ಕಾರವೇಕೆ 4 ಪರ್ಸೆಂಟ್‌ಗೆ ಜಾಸ್ತಿ ಮಾಡಿಕೊಟ್ಟಿತು?

SRI SIDDARAMAIAH : My objection is, don't mention it. 2800 ಕೋಟಿ ಲೋನ್ ತೆಗೆದುಕೊಳ್ಳುತ್ತೇವೆಂದು ಎಂದು ಏಕೆ ಹೇಳುತ್ತೀರಿ? ಜಿ.ಡಿ.ಪಿ. 4 ಪರ್ಸೆಂಟ್‌ವರೆಗೆ ಅಲ್ಲಿಂದ ಆಚೆಗೆ ದಾಟುವುದಿಲ್ಲ ವೆಂದು ಬರೆದುಕೊಳ್ಳಿ. ಆ ರೀತಿ amendment ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : Amendment ಏಕೆ ಮಾಡಬೇಕು? ದಾಟಕೂಡದು ಎಂದೇ ಕೇಂದ್ರ ಸರ್ಕಾರ ಹೇಳಿರುವುದು. ಅದು ದಾಟುವುದಿಲ್ಲ. ನೀವು ಇದ್ದಾಗಲೂ ದಾಟಿಲ್ಲ ನಾವಿದ್ದಾಗಲೂ ದಾಟಿಲ್ಲ, ಮುಂದೆ 4 ಪರ್ಸೆಂಟ್ ದಾಟುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ : 2800 ಕೋಟಿ ಸಾಲವೆಂದು ಏಕೆ ಹೇಳಿಕೊಂಡಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ಪರ್ಸೆಂಟ್ ಜಾಸ್ತಿ ಅಂದರೆ ಅಷ್ಟು ತೆಗೆದುಕೊಳ್ಳಲು ಅವಕಾಶವಾಯಿತು ಅಷ್ಟೆ..

SRI SIDDARAMAIAH : You may need borrowings or you may not need borrowings, ನಿಮಗೆ borrowings ಬೇಕೋ ಬೇಡವೋ ಗೊತ್ತಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾವು ಪ್ರಾವಿಜನ್ ಮಾಡಿ ಇಟ್ಟುಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ : 4 ಪರ್ಸೆಂಟ್ ಅಂದರೆ ಅದೇ ಅರ್ಥ ಅಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ : ಪ್ರಾವಿಜನ್ ಮಾಡಲಿಲ್ಲವೆಂದು ಇಟ್ಟುಕೊಳ್ಳಿ. ನಾಳೆ ದಿವಸ ಅನಿವಾರ್ಯವಾಗಿ ಸಾಲ ಮಾಡಬೇಕು ಎಂದರೆ ಏನು ಮಾಡಬೇಕು?

ಡಾ: ಹೆಚ್.ಸಿ.ಮಹದೇವಪ್ಪ : ಅವರು ಸಾಲ ತೆಗೆದುಕೊಳ್ಳಬಾರದು ಎಂದು ಹೇಳುತ್ತಿಲ್ಲ. ಆದರೆ 4 ಪರ್ಸೆಂಟ್ ಎಂದರೆ, indirectly that is the meaning. As and when it is required...

ಡಾ: ವಿ.ಎಸ್.ಆಚಾರ್ಯ : ಕಳೆದ ವರ್ಷ ಸೆಪ್ಟೆಂಬರ್ ಭಾಗದಿಂದ ತೋರಿ ಬಂದಂಥ ರಿಸೆಷನ್‌ನ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದವರು ಎಲ್ಲಾ ರಾಜ್ಯಗಳ ಅರ್ಥ ಸಚಿವರನ್ನು ಕರೆದು ಮಾಡನಾಡಿದಾಗ, ಉಳಿದೆಲ್ಲಾ ರಾಜ್ಯಗಳು ಮೂರೂವರೆ ಅಥವಾ 4 ಪರ್ಸೆಂಟ್ ಬಗ್ಗೆ ಮಾಡನಾಡುತ್ತಿರುವಾಗ ನಾವು ಮಾತ್ರ ನಮಗೆ ಅಂಥ ಸನ್ನಿವೇಶ ಬಂದಿದೆಯೆಂದು ಹೇಳಲಿಲ್ಲ.

SRI SIDDARAMAIAH : Fiscal Responsibility Act ನ Section (4) ಓದಿ.

ಡಾ: ವಿ.ಎಸ್.ಆಚಾರ್ಯ : ಅದಕ್ಕೂ ಈಗ ಇರುವ ಪರಿಸ್ಥಿತಿಗೂ ವ್ಯತ್ಯಾಸವಿದೆ. ಆ ದೃಷ್ಟಿಯಿಂದ ಕೇಂದ್ರ ಸರ್ಕಾರ ಇದನ್ನು 4 ಪರ್ಸೆಂಟ್‌ವರೆಗೆ ಹೆಚ್ಚು ಮಾಡಿದೆ. ಅವರು ಮೂರೂವರೆ ಪರ್ಸೆಂಟ್ ಮಾಡಿಕೊಂಡಿದ್ದಾಗಲೂ ನಾವು ಅದರಂತೆ ಮಾಡಲಿಲ್ಲ. ಆದ್ದರಿಂದ ಈಗ ಕೇಂದ್ರ ಸರ್ಕಾರ ರಾಜ್ಯಗಳಿಗೆ you can go up to 4% ಎಂದು ಹೇಳಿದೆ. ಅದರ ಅರ್ಥ ನೀವು ಸಾಲ ತೆಗೆದುಕೊಂಡೇ ಬಿಡಿ ಎಂದಲ್ಲ. This 4% will enable the State Government to borrowing of RS.2800 crore.

SRI SIDDARAMAIAH : Fiscal deficit shall not exceed 4% ಎಂದರೆ ಅದೇ ಅರ್ಥ ಅಲ್ಲವೇ? 3 ರಿಂದ 4 ಪರ್ಸೆಂಟ್ ಎಂದರೆ ತಮಗೆ ಒಂದು ಪರ್ಸೆಂಟ್ ಕುಷನ್ ಸಿಕ್ಕಿತಲ್ಲಾ. You may borrow or you may not borrow.

Dr. V.S.ACHARYA : Just to through more light about the subject to our members..3 ಪರ್ಸೆಂಟ್ ಇರುವುದು 4 ಪರ್ಸೆಂಟ್ ಆಗುವಾಗ ಇವತ್ತಿನ GSDP level ನಲ್ಲಿ ಎಲ್ಲರಿಗೂ ಗೊತ್ತಾಗಲಿ ಎಂದು ನಾವು ಮಾಡಿದ್ದು. To enlighten our people more. That's all.. Nothing else.

ಶ್ರೀ ಸಿದ್ದರಾಮಯ್ಯ : I am not opposing. 3 ರಿಂದ 4 ಪರ್ಸೆಂಟ್ ಮಾಡುವುದಾದರೆ I have no objection. ಆದರೆ, ನೀವು Financial Memorandum ನಲ್ಲಿ 2800 ಕೋಟಿವರೆಗೆ ಈ ವರ್ಷ ಸಾಲ ತೆಗೆದುಕೊಳ್ಳಬಹುದು ಎಂದು ಬರೆದಿದ್ದೀರಲ್ಲಾ, ಅದನ್ನು ಬರೆಯಲು ಹೋಗಬೇಡಿ. 3 ಪರ್ಸೆಂಟ್‌ನಿಂದ 4 ಪರ್ಸೆಂಟ್ ಎಂದು ಇಟ್ಟುಕೊಳ್ಳಿ. 1 ಪರ್ಸೆಂಟ್ ಕುಷನ್ ಇದ್ದೇ ಇರುತ್ತದೆ. Remove that, ಕುಷನ್ ಇಟ್ಟುಕೊಳ್ಳಿ. You may borrow or you may not borrow. Suppose ಈ ವರ್ಷ resources increase ಆದರೆ why do want to borrow? ಈ ವರ್ಷ ತೆರಿಗೆ ಜಾಸ್ತಿ ಬಂದು resources improve ಆಯಿತು ಎಂದು ಇಟ್ಟುಕೊಳ್ಳೋಣ. ಆಗ you need not borrow.

ಶ್ರೀ ಬಿ.ಎಸ್.ಯಡಿಯೂರಪ್ಪ : ಹೋದ ವರ್ಷ ಮೂರೂವರೆ ಪರ್ಸೆಂಟ್‌ವರೆಗೆ ಅವಕಾಶ ಇತ್ತು. ಆದರೆ, ನಾವು ಅಷ್ಟು ಎಲ್ಲಿ

ತೆಗೆದುಕೊಂಡಿದ್ದೇವೆ? ಇವತ್ತು 4 ಪರ್ಸೆಂಟ್‌ಗೆ ಪ್ರಾವಿಜನ್ ಮಾಡಿ ಕೊಂಡಿದ್ದೇವೆ. ಮುಂದೆ ಸಾಲ ತೆಗೆದುಕೊಳ್ಳಬೇಕೋ ಬೇಡವೋ ಎಂಬುದು ಪರಿಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ. ಅನಿವಾರ್ಯವಾದರೆ ತೆಗೆದುಕೊಳ್ಳ ಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ: 4% of the GSDP ಎಂದು ಮಾಡಿಕೊಂಡಿದ್ದರೆ ತಪ್ಪೇನಿದೆ? ನಿಮಗೆ ಒಂದು ಪರ್ಸೆಂಟ್ ಕುಷನ್ ಇದ್ದೇ ಇರುತ್ತದಲ್ಲಾ? ಅದರಲ್ಲೇನು ತಪ್ಪಿದೆ?

ಉಪಾಧ್ಯಕ್ಷರು : 2009ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ 2ನೇ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು : " ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ಮೊದಲನೆಯ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಇದಕ್ಕೆ ನಮ್ಮ ಒಪ್ಪಿಗೆ ಇಲ್ಲ.

ಪ್ರಸ್ತಾವ ಅಂಗೀಕಾರ

ಶ್ರೀ ಬಿ.ಎಸ್.ಯಡಿಯೂರಪ್ಪ : (ಮುಖ್ಯಮಂತ್ರಿಯವರು) : ಮಾನ್ಯ ಉಪಾಧ್ಯಕ್ಷರೆ, **2009ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ 2ನೇ ತಿದ್ದುಪಡಿ** ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ **2009ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ 2ನೇ ತಿದ್ದುಪಡಿ ವಿಧೇಯಕವನ್ನು** ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ಕರ್ನಾಟಕ ಪೌರ ನಿಗಮ ತಿದ್ದುಪಡಿ ವಿಧೇಯಕ, 2009ನ್ನು ಮಂಡಿಸಬೇಕು.

ಶ್ರೀ ಸಿದ್ದರಾಮಯ್ಯ : ಈಗ ಬೇಡ. ನಾಳೆ ತೆಗೆದುಕೊಳ್ಳಿ. ನಮಗೆ ಬೇರೆ ಸಭೆ ಇದೆ. ಅವರು 8 ಗಂಟೆಯಿಂದ ನಮಗಾಗಿ ಕಾಯುತ್ತಿದ್ದಾರೆ. Please, you have to co-operate. Please co-operate.

ಶ್ರೀ ಬಿ.ಎಸ್.ಯಡಿಯೂರಪ್ಪ : ಇದರಲ್ಲಿ ಏನೂ ಇಲ್ಲ. ಎರಡು ನಿಮಿಷದಲ್ಲಿ ಮುಗಿಯುತ್ತದೆ.

ಶ್ರೀ ಸಿದ್ದರಾಮಯ್ಯ : ಆಯಿತು. ಇನ್ನೊಂದು ದಿವಸ ಮಾಡೋಣ ಬಿಡಿ. ನಾವು ಹೊಗುತ್ತೇವೆ ನೀವು ಮಾಡಿಕೊಳ್ಳಿ. ನಮಗೆ ಸಹಕಾರ ಕೊಡುವುದಿಲ್ಲವೆಂದರೆ ಹೇಗೆ? ಅವರು 8 ಗಂಟೆಯಿಂದ ಕಾಯುತ್ತಿದ್ದಾರೆ. ನಮಗೆ ಬೇರೆ ಸಭೆ ಇದೆ. ಈಗ 9–30 ಗಂಟೆಯಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ. ನಾನು ರಿಪ್ಲೈ ಮಾಡಬೇಕು.

ಶ್ರೀ ಸಿದ್ದರಾಮಯ್ಯ : ಹಾಗಾದರೆ ನಾವೇನು ಮಾತನಾಡುವುದೇ ಬೇಡವೆ? ನಾನೂ ಮಾತನಾಡಬೇಕು. ಬೇಡಿಕೆಗಳ ಮೇಲೆ ಉತ್ತರವನ್ನು ಯಾರಿಗೆ ಕೊಡುತ್ತೀರಿ? ನಾವು ಮಾತನಾಡದೆಯೇ ನೀವು ಉತ್ತರ ಕೊಡುವುದಾದರೆ ಮಾಡಿಕೊಳ್ಳಿ. ಬೇಡಿಕೆಗಳ ಮೇಲೆ ವಿರೋಧ ಪಕ್ಷದವರಿಗೆ ಉತ್ತರ ಕೊಡುವುದಾದರೆ ಕೊಡಿ. ಏಕೆ ಉತ್ತರ ಕೊಡುತ್ತೀರಿ ಹೇಳಿ? For what you are going to reply? ಬೇಡಿಕೆಗಳ ಮೇಲೆ ಓದಿಬಿಟ್ಟು ಹೊರಟುಹೊಗುವುದೇ? ನಾವು ನಾಳೆ ಮಾತನಾಡುತ್ತೇವೆ. ತಾವು ಏತಕ್ಕೋಸ್ಕರ ಮತ್ತು ಯಾರಿಗೋಸ್ಕರ ಉತ್ತರ ಕೊಡುತ್ತಿರಿ?

ಉಪಾಧ್ಯಕ್ಷರು : ಒಂದು ಪ್ರಕಟಣೆ ಇದೆ.